## ಮಾತು-ಕತೆ

ಒಂದು ರಾತ್ರಿ ಅಮ್ಮ ಹಾಲು ಕಾಯಿಸುವಾಗ, ಅಲ್ಲಿಯೇ ಕುಳಿತಿದ್ದ ನಾನು ಕೈಯಲ್ಲಿದ್ದ ಉಂಗುರ ತೆಗೆದು ಒಲೆಗೆ ಹಾಕಿದ್ದೆ. 'ಇದನ್ನು ಹಾಕ್ಕೊಂಡರೆ ಪಾಸಾಗ್ತೀಯ' ಎಂದು ಅಮ್ಮ ತೊಡಿಸಿದ್ದ ಉಂಗುರವದು. ನಮ್ಮ ಊರಿಗೆ ಬಂದಿದ್ದ ಸ್ವಾಮೀಜಿ ಆ ಉಂಗುರ ಕೊಟ್ಟಿದ್ದರು. ಅಪಾರ ಮಹಿಮೆಯ ಉಂಗುರ ಬಿಸಾಡಿದ್ದರಿಂದ ಅಮ್ಮನಿಗೆ ಆತಂಕವಾಗಿತ್ತು. ನನಗೆ ಏನಾದರೂ ಆಗಬಹುದು ಎನ್ನುವ ಆತಂಕದಲ್ಲಿ ರಾತ್ರಿಯಿಡೀ ಒದ್ದಾಡಿದ್ದರು. ಬೆಳಗಾದಾಗ ನನ್ನ ಕೈಕಾಲೆಲ್ಲ ಸರಿಯಾಗಿದ್ದುದನ್ನು ನೋಡಿದ ಮೇಲೆಯೇ ಅವರಿಗೆ ಸಮಾಧಾನ. 'ರಾತ್ರಿಯೆಲ್ಲ ಹರಕೆ ಹೊತ್ತುಕೊಂಡಿದ್ದರಿಂದ ನಿನ್ನ ಕೈ ಉಳೀತು' ಎಂದು ಹೇಳಿದರು. ಆ ಘಟನೆ ಆಧರಿಸಿ 'ದೌರ್ಬಲ್ಯ' ಎನ್ನುವ ಕಥೆ ಬರೆದಿದ್ದೆ. ಆ ಕಥೆ ಓದಿದ್ದ ಶಾಲೆಯ ಅಧ್ಯಕ್ಷರು – 'ನೀವು ಇಲ್ಲಿಗೆ ಹೊಂದುವುದಿಲ್ಲ' ಎಂದರು. ಅಲ್ಲಿಗೆ ಒಂದು ವಾರ ಕಾಲದ ಮೇಷ್ಟ್ರು ಕೆಲಸ ಕೊನೆಗೊಂಡಿತು.

ಓದು ಮುಂದುವರೆಸಬೇಕು ಎಂದು ಮೈಸೂರಿಗೆ ಬಂದೆ. ಮೈಸೂರು ಡೈರಿಯಲ್ಲಿ ಐದು ವರ್ಷ ದಿನಗೂಲಿ ಕೆಲಸ ಮಾಡಿಕೊಂಡು ಪದವಿ, ಸ್ನಾತಕೋತ್ತರ ಪದವಿ ಮಾಡಿದೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿಕೊಂಡು ಡಿಗ್ರಿ ಮುಗಿಸಿದೆ. ಪಿಯುಸಿಯಲ್ಲಿ ಫೇಲಾಗಿದ್ದುದರ ಸೇಡನ್ನು ತೀರಿಸಿಕೊಳ್ಳುವಂತೆ ಡಿಗ್ರಿಯಲ್ಲಿ ಅಂಕಗಳನ್ನು ಗುಡ್ಡೆ ಹಾಕಿಕೊಂಡಿದ್ದೆ. ಈ ಸಾಹಸವನ್ನು ಊರಲ್ಲಿ ಹೇಳಿಕೊಂಡರೆ, ನನ್ನ ಇತಿಹಾಸವನ್ನು ನೆನಪಿನಲ್ಲಿಟ್ಟುಕೊಂಡಿದ್ದ ಊರಲ್ಲಿನ ಯಾರೂ ನಾನು ಡಿಗ್ರಿ ಪಾಸಾದುದನ್ನು ನಂಬಲಿಲ್ಲ.

ಡಿಗ್ರಿ ಮುಗಿದ ನಂತರ ಎಂ.ಎ ಓದುವ ನನ್ನ ಬಯಕೆಗೆ ತೊಡಕೊಂದು ಎದುರಾಯಿತು. ನೈಟ್ ಷಿಫ್ಟ್ ಕೊಡಲು ಆಗುವುದಿಲ್ಲ ಎಂದು ಡೈರಿಯಲ್ಲಿ ಹೇಳಿದರು. ಗಂಗೋತ್ರಿಯಲ್ಲಿ ಎಂ.ಎಂ ಪದವಿ ಸಂಜೆ ತರಗತಿಗಳು ಇರಲಿಲ್ಲ. ಹಗಲಿನ ತರಗತಿಗಳಿಗೆ ಹೋಗಬೇಕೆಂದರೆ ಕೆಲಸ ಬಿಡಬೇಕಾಗಿತ್ತು. ಅಂದಿನ ಸಂದರ್ಭದಲ್ಲಿ ಕೆಲಸ ಬಿಟ್ಟು ಓದು ಮುಂದುವರಿಸುವುದು ಸಾಧ್ಯವಿರಲಿಲ್ಲ. ಆಗ ಮಂಚಯ್ಯ ಎನ್ನುವ ಜಿ.ಎಂ. ಇದ್ದರು. 'ದಿನಗೂಲಿ ನೌಕರರು ಸತತವಾಗಿ ರಾತ್ರಿಪಾಳಿ ಮಾಡುವುದು ಸಾಧ್ಯವಿಲ್ಲ. ಕೆಲಸ–ಓದು ಎರಡರಲ್ಲಿ ಒಂದನ್ನು ಆರಿಸಿಕೋ' ಎಂದರು. ಅದೇ ಸಮಯದಲ್ಲಿ ನನ್ನ 'ಬಿಳಿಯ ಹಾಲಿನ ಕಪ್ಪು ಕತೆ' ಎನ್ನುವ ಕಥೆ 'ಸುಧಾ'ದಲ್ಲಿ ಪ್ರಕಟವಾಯಿತು. ಡೈರಿಯಲ್ಲಿ ನಡೆಯುವ ಭ್ರಷ್ಟಾಚಾರವನ್ನು ವಿಡಂಬಿಸಿ ಬರೆದ ಕಥೆ ಅದಾಗಿತ್ತು. 'ಸೆಕೆಂಡ್ ಡಿವಿಜನ್ ಕ್ಲರ್ಕಿನ ಸಾವಿನ ಉತ್ತರಾರ್ಧ' ಎನ್ನುವ ಮತ್ತೊಂದು ಕಥೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾಯಿತು. ಈ ಕಥೆಗಳು ಡೈರಿಯವರಿಗೆ ನನ್ನ ಬಗ್ಗೆ ಬೇರೆಯದೇ ಸುದ್ದಿ ಮುಟ್ಟಿಸಿದವು. ಬಹುಶಃ ಅವರು ನನ್ನ ಬಗ್ಗೆ ಅಳುಕಿರಬೇಕು. ನನ್ನನ್ನು ಕರೆದು, ರಾತ್ರಿ ಪಾಳಿ ನೀಡಲು ಒಪ್ಪಿಕೊಂಡರು. ಹಾಲಿನ ಲಾರಿಗಳಿಗೆ ಪೆಟ್ರೋಲ್ ಹಾಕುವ ಬಂಕ್‌ನಲ್ಲಿ ಕೆಲಸ ಮಾಡಲು ಹೇಳಿದರು. ರಾತ್ರಿ 10ರಿಂದ ಬೆಳಗ್ಗೆಯವರೆಗೆ ಕೆಲಸ. 1983ರಿಂದ ಎರಡು ವರ್ಷಗಳ ಕಾಲ ಹೀಗೆ ದುಡಿದೆ. ಬೆಳಗ್ಗೆ ಲಲಿತಮಹಲ್ ತುದಿಯಿಂದ ಮಾನಸಗಂಗೋತ್ರಿಗೆ ಸೈಕಲ್‌ನಲ್ಲಿ ಹೋಗುತ್ತಿದ್ದೆ. ಗಂಗೋತ್ರಿಯಲ್ಲಿನ ದಿನಗಳು ನನಗೆ ಅದ್ಭುತ ಜಗತ್ತನ್ನು ತೆರೆದವು. ಹಾ.ಮಾ. ನಾಯಕ, ಶಂಕರ ಮೊಕಾಶಿ ಪುಣೇಕರ, ತಿಪ್ಪೇರುದ್ರಸ್ವಾಮಿ, ಪ್ರಧಾನ ಗುರುದತ್ತ, ಸುಧಾಕರ, ಟಿ.ವಿ. ವೆಂಕಟಾಚಲಶಾಸ್ತ್ರಿ, ಜಿ.ಎಚ್. ನಾಯಕ, ವಿಜಯಾ ದಬ್ಬೆ, ಎಚ್.ಎಂ. ಚನ್ನಯ್ಯ, ಸಿಪಿಕೆ – ಹೀಗೆ ಘಟಾನುಘಟಿ ಮೇಷ್ಟ್ರುಗಳು ದೊರೆತರು.

1985ರಲ್ಲಿ ಗಂಗೋತ್ರಿಯಿಂದ ಹೊರಬೀಳುವ ವೇಳೆಗೆ ಪ್ರಜ್ಞಾಪೂರ್ವಕವಾಗಿ ಪ್ರೇಮವೊಂದರಲ್ಲಿ ಸಿಕ್ಕಿಬಿದ್ದಿದ್ದೆ. ನನ್ನ ಕಥೆಗಳಂತೂ ಯಾವ ಪತ್ರಿಕೆ ತೆಗೆದರೂ ಇರುತ್ತಿದ್ದವು.